**ಓ ಎಸ್ ನಂಃ 24/2020**
**ಪಿ ಡಬ್ಲ್ಯೂ ಃ 1**

**ದಿಃ 07.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 7, 9 ಮತ್ತು 10 ರ ಪರ ಶ್ರೀ. ಆರ್ ಎಸ್ ವಕೀಲರಿಂದಃ-**

ದಾವಾ ಐಟಂ ನಂ. 2 ರಿಂದ 4 ನ್ನು 10 ನೇ ಪ್ರತಿವಾದಿಯ ತೋಟಲಯ್ಯನವರ ಮಗ ದೊಡ್ಡಯ್ಯನವರ ಹೆಸರಿನಲ್ಲಿದೆ ಎಂದರೆ ಸರಿ. ಯಾವ ಆಧಾರದ ಮೇರೆಗೆ ಸದರಿ ಸ್ವತ್ತುಗಳ ಖಾತೆಯು 10 ನೇ ಪ್ರತಿವಾದಿ ದೊಡ್ಡಯ್ಯನವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 2 ರಿಂದ 4 ಸ್ವತ್ತುಗಳನ್ನು ದಿಃ 17.06.1991 ರ ಕ್ರಯ ಮಾಲಕ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ವಿಚಾರವನ್ನು ತಮ್ಮ ವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. 2 ರಿಂದ 4 ನೇ ಷೆಡ್ಯೂಲ್ ಸ್ವತ್ತುಗಳು 10 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಆದ ಕಾರಣ ಸದರಿ ಸ್ವತ್ತುಗಳಲ್ಲಿ ವಾದಿಗಳಿಗಾಗಲಿ ಅಥವಾ ಉಳಿದ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವ ಐಟಂ ನಂ. 9 ರ ಸ್ವತ್ತಿನ ಖಾತೆಯ ಪಹಣಿಯು 1 ನೇ ಪ್ರತಿವಾದಿಯ ಗಂಡನಾದ ಗಂಗಯ್ಯನವರಿಗೆ ಆಗಿದೆ ಮತ್ತು ಸದರಿ ಜಮೀನು ದಿಃ 07.03.1983 ರಂದು ಬಂದಿದೆ ಎಂದರೆ ಸರಿ. ದಾವ ಐಟಂ ನಂ. 10 ರ ಸ್ವತ್ತು 1 ನೇ ಪ್ರತಿವಾದಿಯ ಗಂಡನಾದ ಗಂಗಯ್ಯನವರಿಗೆ ದಿಃ 17.05.1978 ರಂದು ಕ್ರಯ ಪತ್ರ ಆಗಿದೆ ಎಂದರೆ ಸರಿಯಲ್ಲ. ಸರ್ವೆ ನಂ. 26/2 ಕ್ಕೆ ಸಂಬಂಧಪಟ್ಟಂತೆ ತಮ್ಮ ತಾತನವರ ಹೆಸರಿನಲ್ಲಿರುವ ಖಾತೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವ ಐಟಂ ನಂ. 9 ಮತ್ತು 10 ರ ಸ್ವತ್ತಿನ ಖಾತೆಯು ತೋಟಲಯ್ಯನವರ ಹೆಸರಿನಲ್ಲಿತ್ತು. ಸದರಿ ಸ್ವತ್ತುಗಳನ್ನು ನಮ್ಮ ತಂದೆಯವರು ಕ್ರಯಕ್ಕೆ ಪಡೆದಿರುತ್ತಾರೆ. ಕ್ರಯಕ್ಕೆ ಪಡೆದಿರುವ ದಿನಾಂಕಗಳ ಹೆಸರು ನನಗೆ ಈಗ ನೆನಪಿಲ್ಲ. ಸದರಿ ಕ್ರಯ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯ ಪತ್ರಗಳನ್ನು ನಾನು 1973 ನೇ ಸಾಲಿನಲ್ಲಿ ನೋಡಿರುತ್ತೇನೆ. ತೋಟಲಯ್ಯನವರ ಮಕ್ಕಳಾದ ಗಂಗಯ್ಯ, ಕೆಂಪಯ್ಯ ಮತ್ತು 10 ನೇ ಪ್ರತಿವಾದಿ ದೊಡ್ಡಯ್ಯನವರು ಸುಮಾರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಅವರವರ ಹಿಸ್ಸೆಯಲ್ಲಿ ಸ್ವಾಧೀನಾನುಭವದಲ್ಲಿದ್ದು ಅವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ವರ್ಗಾವಣೆ ಆಗಿದೆ ಎಂದರೆ

ಸರಿಯಲ್ಲ. ಗಂಗಯ್ಯ, ಕೆಂಪಯ್ಯ ಮತ್ತು 10 ನೇ ಪ್ರತಿವಾದಿ ದೊಡ್ಡಯ್ಯನವರ ಮಕ್ಕಳು ಸಹ ಅವರ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರು ಬ್ಯಾಂಕ್ ನಲ್ಲಿ ಸಹ ಬೆಳೆ ಸಾಲವನ್ನು ತೆಗೆದುಕೊಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತೋಟಲಯ್ಯನವರಿಗೆ ದೊಡ್ಡಯ್ಯ ಮತ್ತು ದೊಡ್ಡಯ್ಯ ಎಂಬ ಹೆಸರಿನ ಇಬ್ಬರು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ತಾವು ತಹಶೀಲ್ದಾರ್ ರವರ ಕಛೇರಿಯಿಂದ ಪಡೆದಂತಹ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವ ಸ್ವತ್ತುಗಳಲ್ಲಿ ವಾದಿಗಳಿಗಾಗಲಿ ಅಥವಾ 11 ನೇ ಪ್ರತಿವಾದಿಗಾಗಲಿ ಯಾವುದೆ ಭಾಗಾಂಶ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 7 ಮತ್ತು 9 ಮತ್ತು 10 ರವರಿಗೆ ಸೇರಿದ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿ 1 ರಿಂದ 7 ಮತ್ತು 9 ಮತ್ತು 10 ರವರೆ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**